ಮೂಲಸೌಲಭ್ಯಕ್ಕಾಗಿ ನೇರವಾಗಿ ಸಂಪರ್ಕಿಸಿ: ಶಾಸಕಿ ಮಂಜುಳಾ

ಮಹದೇವಪುರ: ರಸ್ತೆ, ನೀರು, ಒಳಚರಂಡಿ ಸೇರಿದಂತೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಮೂಲಕ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸುತ್ತಿದ್ದೇನೆ ಎಂದು ಶಾಸಕಿ ಮಂಜುಳಾ ಲಿಂಬಾವಳಿ ತಿಳಿಸಿದರು. ಕ್ಷೇತ್ರದ ನಲ್ಲೂರಹಳ್ಳಿ, ಅಂಬೇಡ್ಕರ್‌ಗುಟ್ಟ, ವರ್ತೂರು, ಗುಂಜೂರು, ಚಿಕ್ಕಬೆಳ್ಳಂದೂರು, ಮುನ್ನೆ ಕೊಳ್ಳಾಲ ಮುಂತಾದ ಪ್ರದೇಶಗಳಲ್ಲಿ ರಸ್ತೆ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದರು. ಜನರಿಗೆ ಯಾವುದೇ ಸಮಸ್ಯೆ ಇದ್ದರೆ, ಅವರು ನನ್ನನ್ನು ನೇರವಾಗಿ ಸಂಪರ್ಕಿಸಬಹುದು. ಪ್ರತಿ ವಾರ್ಡ್‌ನ ಮುಖಂಡರು ಒಟ್ಟಾಗಿ ಜನರ ಸಮಸ್ಯೆಗಳನ್ನು ಪರಿಹರಿಸಲು ಕೆಲಸ ಮಾಡುತ್ತಿದ್ದಾರೆ ಎಂದು ತಿಳಿಸಿದರು. ನಗರ ಮಂಡಲ ಅಧ್ಯಕ್ಷ ಶ್ರೀಧರ್‌ರೆಡ್ಡಿ, ಆರೋಗ್ಯ ಮತ್ತು ವಿಪತ್ತು ನಿರ್ವಹಣಾ ಟಾಸ್ಕ್ ಫೋರ್ಸ್ ಅಧ್ಯಕ್ಷ. ಮಾರಪ್ಪ, ವೈಟ್ ಫೀಲ್ಡ್ ವಾರ್ಡ್ ಕಾಮಗಾರಿ ಉಸ್ತುವಾರಿ ನಲ್ಲೂರಹಳ್ಳಿ ಚಂದ್ರಶೇಖರ ರೆಡ್ಡಿ, ಹರೀಶ್ ರೆಡ್ಡಿ, ಅಂಬೇಡ್ಕರ್‌ನಗರ ರವಿ ಇತರರಿದ್ದರು.

ಬೆಂ.ನಗರ ವಿವಿಯಲ್ಲಿ ಎಂಬಿಎ ಪಠ್ಯ ಕುರಿತ ಕಾರ್ಯಾಗಾರ

ಬೆಂಗಳೂರು: ಡಾ. ಮನಮೋಹನ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಆಡಳಿತ ಅಧ್ಯಯನ ಕೇಂದ್ರ ಮತ್ತು ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಗಳ ಸಹಯೋಗದಲ್ಲಿ ಎಂಬಿಎ ಪಠ್ಯಕ್ರಮ ಕುರಿತ ಬೋಧಕ-ಬೋಧನಾ ಅಭಿವೃದ್ಧಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ.ರಮೇಶ್ ಬಿ, ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶೇಷಾದ್ರಿಪುರಂ ಶಿಕ್ಷಣ ದತ್ತಿ ಗೌರವ ಪ್ರಧಾನ ಕಾರ್ಯದರ್ಶಿ ಡಾ.ವುಡೇ ಪಿ ಕೃಷ್ಣಾ ಮತ್ತು ಎನ್‌ಐಪಿಎಂ ರಾಷ್ಟ್ರೀಯ ಅಧ್ಯಕ್ಷ, ಪಿ ಆರ್ ಬಸವರಾಜು ಆಗಮಿಸಿದ್ದರು. ಡಾ.ಸಾರಿಕಾ ಲೋಹಾನಾ ಪ್ರಬಂಧ ವಕ್ತಾರರಾಗಿದ್ದರು.

ದೇಗುಲ ನಿರ್ವಹಣೆ ಹಿಂದೂಗಳಿಗಿರಲಿ: ರಾಮ್ ಮಾಧವ್

ಹಿಂದೂಗಳ ವೈವಿಧ್ಯತೆ ಗೌರವಿಸುವ ಮಂಡಳಿ ಅಗತ್ಯ | ಈ ಕುರಿತು ಕರಡು ರಚನೆಗೆ ಸಿದ್ಧತೆ: ಚಿಂತಕ | ಆರೆಸ್ಸೆಸ್ ಕುರಿತ ಕೃತಿ ಬಿಡುಗಡೆ

■ ಉದಯವಾಣಿ ಸಮಾಚಾರ

ಬೆಂಗಳೂರು: ದೇವಸ್ಥಾನಗಳ ನಿರ್ವಹಣೆಯ ಜವಾಬ್ದಾರಿ ಸರ್ಕಾರದಿಂದ ವಾಪಸ್ ತೆಗದುಕೊಂಡು ಸಮಾಜದ ಸುಪರ್ದಿಗೆ ಒಪ್ಪಿಸಬೇಕು. ಈ ಬಗೆಗಿನ ನಿಯಮಗಳ ಕರಡನ್ನು ಸಿದ್ಧಪಡಿಸುತ್ತಿದ್ದು ಇದನ್ನು ಸರ್ಕಾರಕ್ಕೆ ಒಪ್ಪಿಸಲಾಗುವುದು ಎಂದು ಚಿಂತಕ, ಲೇಖಕ ರಾಮ್ ಮಾಧವ್ ಹೇಳಿದ್ದಾರೆ.

ಬಿಎಂಎಸ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಥಿಂಕರ್ಸ್ ಫೋರಂ ಕರ್ನಾಟಕ ಆಯೋಜಿಸಿದ್ದ ತಮ್ಮ ಕೃತಿ 'ಶಾಖಾ ಟು ನೇಷನ್ – ದಿ ಗ್ರೇಟ್ ಸ್ಪೀಚಸ್ ಆಫ್ ಆರ್‌ಎಸ್‌ಎಸ್ 1925-2025' ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಮುಸಲ್ಮಾನರಲ್ಲಿ ವೈಯಕ್ತಿಕ ಕಾನೂನು ಮಂಡಳಿ ಇದ್ದ ಹಾಗೆ ಹಿಂದೂಗಳಲ್ಲಿಯೂ ಇರಬೇಕು. ಈ ಮಂಡಳಿ ಹಿಂದೂಗಳ ವೈವಿಧ್ಯತೆಯನ್ನು ಗೌರವಿಸುವ, ಪಾಲಿಸುವ ಜೊತೆಗೆ ಕೆಲವು ವಿಷಯಗಳಲ್ಲಿ ತೀರ್ಮಾನ ತೆಗೆದುಕೊಳ್ಳುವ ಶಕ್ತಿ ಹೊಂದಿರಬೇಕು. ಉದಾಹರಣೆಗೆ ನಮ್ಮ ದೀಪಾವಳಿಯನ್ನು ಯಾವಾಗ ಆಚರಿಸುವುದು ಎಂದು ಸರ್ಕಾರ ನೀಡುವ ದಿನದ ಮೇಲೆ ತೀರ್ಮಾನ ಆಗುತ್ತಿದೆ. ಈ ಹಿನ್ನೆಲೆಯಲ್ಲಿ ನಾವೇ ದೀಪಾವಳಿಗೆ ಯಾವಾಗ ರಜೆ ನೀಡಿ ಎಂದು ಸರ್ಕಾರಕ್ಕೆ ಸಲಹೆ ನೀಡುವ ರೀತಿಯಲ್ಲಿ ಮಂಡಳಿ ಕಾರ್ಯ ನಿರ್ವಹಿಸಬೇಕು ಎಂದು ಹೇಳಿದರು.

ಆರ್‌ಎಸ್‌ಎಸ್ ಆದರ ನಾಯಕರಿಂದ ಜೀವಂತ ವಾಗಿಲ್ಲ; ಅದು ಲಕ್ಷಾಂತರ ಜನರ ನಂಬಿಕೆಯಿಂದ ಜೀವಂತವಾಗಿದೆ. ಆದ್ದರಿಂದ ಚೈತನ್ಯ ಪೂರ್ಣ ವಾಗಿರುವ ಆರ್‌ಎಸ್‌ಎಸ್ ಅನ್ನು ನಿಷೇಧಿಸಲು ಯಾರಿಗೂ ಸಾಧ್ಯವಿಲ್ಲ ಎಂದು ತಿಳಿಸಿದರು.

ಆರ್‌ಎಸ್‌ಎಸ್‌ನ ಪ್ರಮುಖ ಭಾಷಣಗಳನ್ನು ಅವಲೋಕಿಸಿದಾಗ ಮೂರ್ನಾಲ್ಕು ಭಾಷಣಗಳು ಮಾತ್ರ ಆರ್‌ಎಸ್‌ಎಸ್ ಬಗ್ಗೆ ಚರ್ಚಿಸುತ್ತೇವೆ. ಉಳಿದಂತೆ ಎಲ್ಲ ಭಾಷಣಗಳು ಬಲಿಷ್ಠ ದೇಶ ನಿರ್ಮಾಣ, ಸಂಘಟಿತ ಸಮಾಜ ಕಟ್ಟುವುದರ ಬಗ್ಗೆ ಚರ್ಚಿಸುತ್ತದೆ. ಆರ್‌ಎಸ್‌ಎಸ್ ಒಂದು ಸಂಘಟನೆ, ಪಕ್ಷ ಕಟ್ಟುವ ಗುರಿ ಹೊಂದಿಲ್ಲ. ಒಂದು ಸಂಘಟಿತ ಸಮಾಜ ನಿರ್ಮಾಣದ ಗುರಿ ಹೊಂದಿದೆ ಎಂದು ಹೇಳಿದರು.

ಬಿಜೆಪಿ ತನ್ನ ವ್ಯವಹಾರವನ್ನು ತಾನೇ ನಡೆಸುವಷ್ಟು ಪ್ರಬುದ್ಧವಾಗಿದೆ. ಯಾವಾಗ ಅದಕ್ಕೆ ಸಮಾಲೋಚನೆ ಆಗತ್ಯವಿದೆಯೋ ಆಗ ಅದು ಆರ್‌ಎಸ್‌ಎಸ್ ಜೊತೆಗೆ ಚರ್ಚೆ ನಡೆಸುತ್ತದೆ. ಬೇರೆ ಪಕ್ಷಗಳು ನಮ್ಮ ಜೊತೆ ಸಮಾಲೋಚನೆಗೆ ಬಂದರೆ ನಾವು ಸಲಹೆ ನೀಡುತ್ತೇವೆ. ಬಿಜೆಪಿಯು ನಮ್ಮ ಪ್ರಚಾರಕರನ್ನು ಕೇಳುತ್ತದೆಯೋ ಹಾಗೆಯೇ ಅನ್ಯ ಪಕ್ಷಗಳು ಕೇಳಿ, ಪಡೆಯಲಿ. ನಮ್ಮ ಸಂಘಟನೆಗಳ ಕಾರ್ಯಕರ್ತರು ಸಹ ಬೇರೆ ಪಕ್ಷಗಳ ಸಂಘಟನೆಗಳಿಂದ ಕಲಿತಿದ್ದಾರೆ. ಅನ್ಯ ಪಕ್ಷಗಳಿಗೆ ನಮ್ಮ ಬಗ್ಗೆ ಸಮಸ್ಯೆ ಇರಬಹುದು ಆದರೆ ನಮಗಿಲ್ಲ. ಆರ್‌ಎಸ್‌ಎಸ್ ಬಗ್ಗೆ ಬಹಿರಂಗವಾಗಿ ಟೀಕಿಸವ ಅನೇಕರು ಖಾಸಗಿಯಾಗಿ ಆರ್‌ಎಸ್‌ಎಸ್ ಅನ್ನು ಮೆಚ್ಚಿಕೊಳ್ಳುತ್ತಾರೆ ಎಂದು ಅವರು ಹೇಳಿದರು.

ಸಿದ್ಧಾಂತದ ವಿಷಯದಲ್ಲಿ ಜನರಿಗಿಂತ ಒಂದು ಹೆಜ್ಜೆಯಷ್ಟೆ ಮುಂದಿರಬೇಕು, ನಾಲ್ಕು ಹೆಜ್ಜೆ ಮುಂದಿದ್ದರೆ ಅವರು ನಮ್ಮನ್ನು ವಿಚಿತ್ರವಾಗಿ ನೋಡುತ್ತಾರೆ. ಆಧುನಿಕತೆಗೆ ಸಂಬಂಧಿಸಿದಂತೆ ನಾವು ಒಂದು ಹೆಜ್ಜೆ ಹಿಂದಿರಬೇಕೇ ಹೊರತು ತುಂಬಾ ಹಿಂದಿರಬಾರದು. ಆರ್‌ಎಸ್‌ಎಸ್ ಆಧುನಿಕತೆಯ ವಿರೋಧಿಯಲ್ಲ. ಆರ್‌ಎಸ್‌ಎಸ್ ಕಾಲಕ್ಕೆ ತಕ್ಕಂತೆ ಬದಲಾಗಿದೆ. ಆದರೆ ಮೂಲ ಸಿದ್ಧಾಂತಗಳನ್ನು ಕಾಪಾಡಿಕೊಂಡಿದೆ. ನಾವು ಚಡ್ಡಿಯಿಂದ ಪ್ಯಾಂಟ್‌ಗೆ ಬದಲಾಗಿರುವುದು ಇದಕ್ಕೆ ಒಂದು ಉದಾಹರಣೆ ಎಂದು ಹೇಳಿದರು.

ನಾವು ಜನರ ಮೇಲೆ ಏನನ್ನೂ ಹೇರುವುದಿಲ್ಲ, ನಾವು ಜನರು ಅರಿತು ತೀರ್ಮಾನ ಕೈಗೊಳ್ಳಲಿ ಎಂದು ನಂಬಿದ್ದೇವೆ. ಇದು ಹಿಂದೂ ರಾಷ್ಟ್ರ ಎಂಬ ಭಾವನೆ ಎಲ್ಲರಲ್ಲಿಯೂ ಎಚ್ಚೆತ್ತುಕೊಳ್ಳಬೇಕು. ನಾವು ನಮ್ಮ ದೇಶವನ್ನು ಹಿಂದೂ ರಾಷ್ಟ್ರ ಎಂದು ಘೋಷಿಸುವ ಅವಶ್ಯಕತೆಯಿಲ್ಲ, ಆದರೆ ಆ ಭಾವನೆ ಮೊದಲು ನಮ್ಮೊಳಗೆ ಅಂತರ್ಗತವಾಗಬೇಕು ಎಂದರು.

ಭಾರತವೂ ಯಾವಾಗಲೂ ಬಹು ರಾಜ್ಯಗಳ ದೇಶವೇ ಆಗಿತ್ತು. ಸೇನೆಯನ್ನು ಕಳುಹಿಸಿ ಅನ್ಯ ದೇಶ ಗಳನ್ನು ಸೋಲಿಸಿ ಅಖಂಡ ಭಾರತ ನಿರ್ಮಿಸುವುದು ನಮ್ಮ ಉದ್ದೇಶವಲ್ಲ, ಸಾಂಸ್ಕೃತಿಕವಾದ ಅಖಂಡ ದೇಶ ನಿರ್ಮಾಣ ಮಾಡುವುದು ನಮ್ಮ ಗುರಿ ಎಂದು ರಾಮ್ ಮಾಧವ್ ಹೇಳಿದರು.

ಮಿಥಿಕ್ ಸೊಸೈಟಿಯ ಅಧ್ಯಕ್ಷ ವಿ. ನಾಗರಾಜ್ ಮಾತನಾಡಿ, ಆರ್‌ಎಸ್‌ಎಸ್‌ನಲ್ಲಿ ಪ್ರತಿ ಸ್ವಯಂ ಸೇವಕ ಆತನ ಶಾಖೆಯಿಂದ ಗುರುತಿಸಲ್ಪಡುತ್ತಾನೆ. ಅತ್ಯಂತ ಸಣ್ಣ ಘಟಕವಾಗಿರುವ ಶಾಖೆಯಲ್ಲೇ ದೇಶದ ಬಗ್ಗೆ ಚಿಂತನೆ, ದೇಶ ಸೇವೆ ಮಾಡುವ ಆಶಯ ಹುಟ್ಟಿ ಕೊಳ್ಳುತ್ತದೆ. ಆದ್ದರಿಂದ ಈ ಕೃತಿಗೆ ಈ ಹೆಸರು ಸೂಕ್ತವಾಗಿದೆ. ಜಗತ್ತಿನಲ್ಲಿ ಸಿದ್ಧಾಂತಗಳು ಬದಲಾಗುತ್ತವೆ ಆದರೆ ತತ್ವ ಬದಲಾಗುವುದಿಲ್ಲ. ಆರ್‌ಎಸ್‌ಎಸ್ ಹೇಳುವುದು ತತ್ವ. ಈ ತತ್ವಗಳು ಸ್ವಾಮಿ ವಿವೇಕಾನಂದ ಚಿಂತನೆಗಳಿಂದ ಮೂಡಿದೆ ಎಂದು ಈ ಕೃತಿ ತಿಳಿಸುತ್ತದೆ ಎಂದು ಹೇಳಿದರು.

ಬ್ಯುಸಿನೆಸ್ ಇತಿಹಾಸಕಾರ ಶ್ರೀರಾಮ್ ದೇವಥ ಸಂವಾದ ನಡೆಸಿಕೊಟ್ಟರು.



ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ರಾಮ್ ಮಾಧವ್ ಅವರು ಪುಸ್ತಕ ಬಿಡುಗಡೆ ಮಾಡಿದರು.

ಆರ್‌ಎಸ್‌ಎಸ್ ಅಷ್ಟೇ ಅಲ್ಲ, ಭಾರತ ಕೂಡ ನೋಂದಣಿ ಆಗಿಲ್ಲ: ಲೇಖಕ ರಾಮ್ ಮಾಧವ್

ಕರ್ನಾಟಕದಲ್ಲಿ ಕೆಲ ನಾಯಕರು ಆರ್‌ಎಸ್‌ಎಸ್ ಏಕೆ ನೋಂದಾಯಿತ ಸಂಸ್ಥೆಯಲ್ಲ ಎಂದು ಪ್ರಶ್ನೆ ಕೇಳುತ್ತಾರೆ. ಆದರೆ ಭಾರತವು ಒಂದು ದೇಶವವಾಗಿ ನೋಂದಣಿಯಾಗಿಲ್ಲ. ಸಂಘಟಿತ ಭಾರತವನ್ನು ಕಟ್ಟುವುದು ಹೇಗೆ ನೋಂದಾಯಿತ ಸಂಸ್ಥೆಯಾಗಲಿದೆ. ಆರ್‌ಎಸ್‌ಎಸ್ ಸಂಸ್ಥೆಯು ಆರ್‌ಎಸ್‌ಎಸ್ ಕಟ್ಟಲು ಸಂಘಟಿತವಾಗಿಲ್ಲ ಎಂದು ಚಿಂತಕ, ಲೇಖಕ ರಾಮ್ ಮಾಧವ್ ತಿಳಿಸಿದರು.



ಯಲಹಂಕದ ಕೆಂಪಾಪುರದಲ್ಲಿ ನಡೆದ ಕನ್ನಡ ರಾಜ್ಯೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಶಾಸಕ ವಿಶ್ವನಾಥ್, ಕೆಂಪಾಪುರ ಗ್ರಾಮ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಕಿರಣ್ ಕುಮಾರ್, ಹೊನ್ನಪ್ಪ, ರುದ್ರೇಶ್, ರಾಮಲಿಂಗಪ್ಪ, ಸೋಮಶೇಖರ್, ವೇಣು, ಅರುಣ್, ಮಹದೇವಸ್ವಾಮಿ ಇತರರಿದ್ದರು.

ಅಭಿವೃದ್ಧಿಯಲ್ಲಿ ತಾರತಮ್ಯ ಬೇಡ: ಶಾಸಕ

ಸೂಲಿಕೆರೆ ಗ್ರಾಪಂ ನೂತನ ಕಟ್ಟಡ ಉದ್ಘಾಟಿಸಿದ ಎಸ್.ಟಿ.ಸೋಮಶೇಖರ್ ಹೇಳಿಕೆ



ಕಾರ್ಯಕ್ರಮದಲ್ಲಿ ಗ್ರಾಪಂ ಸಿಬ್ಬಂದಿಗೆ ಶಾಸಕ ಸೋಮಶೇಖರ್ ಸಮವಸ್ತ್ರ ವಿತರಿಸಿದರು.

■ ಉದಯವಾಣಿ ಸಮಾಚಾರ

ಕೆಂಗೇರಿ: ಗ್ರಾಮದ ಅಭಿವೃದ್ಧಿ ಕಾರ್ಯ ಗಳಲ್ಲಿ ತಾರತಮ್ಯ ಮಾಡಬಾರದು. ಜನರ ಪ್ರೀತಿ, ವಿಶ್ವಾಸ ಗಳಿಸುವುದು ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಸದಸ್ಯರು, ಅಧ್ಯಕ್ಷರು ಕೆಲಸ ಮಾಡ ಬೇಕು ಎಂದು ಶಾಸಕ ಎಸ್.ಟಿ. ಸೋಮಶೇಖರ್‌ಸೂಚಿಸಿದರು.

ಯಶವಂತಪುರ ಕ್ಷೇತ್ರದ ಸೂಲಿಕೆರೆ ಗ್ರಾಮ ಪಂಚಾಯಿತಿಯ ಮೊದಲನೇ ಮಹಡಿಯ ನೂತನ ಕಟ್ಟಡ ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ಗ್ರಾಮ ಮಾದರಿ ಗ್ರಾಮ ಪಂಚಾಯತಿ ಗಳಾಗಬೇಕು, ಇಲ್ಲಿನ ವ್ಯವಸ್ಥೆಗಳು ಕೂಡ ಮಾದರಿಯಾಗಬೇಕು ಎನ್ನುವ ದೃಷ್ಟಿಯಿಂದ ಕಾರ್ಯ ನಿರ್ವಹಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಗ್ರಾಪಂ ಸಿಬ್ಬಂದಿಗೆ ಸಮವಸ್ತ್ರ ನೀಡಲಾಯಿತು. ಈ ವೇಳೆ ಸೂಲಿಕೆರೆ ಗ್ರಾಪಂ ಅಧ್ಯಕ್ಷ ಚಿಕ್ಕಣ್ಣ, ಮಾಜಿ ಅಧ್ಯಕ್ಷ ಬಿ.ವಿ.ರಾಮ ಚಂದ್ರ, ಸೌಭಾಗ್ಯ ಉಮೇಶ್, ಶೋಭಾ ತಿಮ್ಮೇಗೌಡ, ಸರಸ್ವತಿ ಸಿದ್ದರಾಜು, ಸದಸ್ಯರಾದ ರಾಮಣ್ಣ, ಮುನಿಲಕ್ಷ್ಮೀ ಮಂಜುನಾಥ್, ಉಮಾದೇವಿ, ಮುರಳಿಧರ್, ಇಒ ನಾರಾಯಣ್, ವೀರಭದ್ರ ಸ್ವಾಮಿ ಇತರರಿದ್ದರು.

ಕನ್ನಡ ಹಬ್ಬದಿಂದ ಭಾಷಾಭಿಮಾನ: ಶಾಸಕ

ಕ್ಯಾಲಸನಹಳ್ಳಿಯ ಪಾಮ್ ಬೀಚ್ ಅಪಾರ್ಟ್‌ಮೆಂಟ್‌ನಲ್ಲಿ 70ನೇ ಕನ್ನಡ ರಾಜ್ಯೋತ್ಸವ

ಪೂರ್ವ ಪಾಮ್ ಬೀಚ್ ಅಪಾರ್ಟ್‌ಮೆಂಟ್‌ನಲ್ಲಿ ರಾಜ್ಯೋತ್ಸವ ನಿಮಿತ್ತ ಸಾಂಸ್ಕೃತಿಕ ಕಾರ್ಯಕ್ರಮ.

■ ಉದಯವಾಣಿ ಸಮಾಚಾರ

ಕೆ.ಆರ್.ಪುರ: ಅಪಾರ್ಟ್‌ಮೆಂಟ್ ನಿವಾಸಿಗಳೆಲ್ಲರೂ ಒಂದೆಡೆ ಸೇರಿ ಕನ್ನಡದ ಹಬ್ಬ ಆಚರಿಸುವುದರಿಂದ ಭಾಷಾಭಿ ಮಾನವನ್ನು ಹೆಚ್ಚಿಸುತ್ತದೆ ಎಂದು ಶಾಸಕ ಬೈರತಿ ಬಸವರಾಜ ತಿಳಿಸಿದರು.

ಇಲ್ಲಿನ ಕ್ಯಾಲಸನಹಳ್ಳಿಯ ಪಾಮ್ ಬೀಚ್ ಅಪಾರ್ಟ್‌ಮೆಂಟ್‌ನ ಕನ್ನಡ ಸಾಂಸ್ಕೃತಿಕ ಸಮಿತಿ ಝೆಂಕಾರ ತಂಡ ಆಯೋಜಿಸಿದ್ದ 70ನೇ ಕನ್ನಡ ರಾಜ್ಯೋತ್ಸವದಲ್ಲಿ ಮಾತನಾಡಿದ ಅವರು, ಅಪಾರ್ಟ್‌ಮೆಂಟ್‌ನಲ್ಲಿ ಹಲವು ಭಾಷಿಕರಿದ್ದರೂ ಕನ್ನಡ ಬಗ್ಗೆ ಅಪಾರ ಕಾಳಜಿ ಹೊಂದಿ ರಾಜ್ಯೋತ್ಸವ ಆಚರಿಸುತ್ತಿರುವುದು ಕನ್ನಡದ ಮೇಲಿನ ಪ್ರೀತಿ ತೋರಿಸುತ್ತದೆ ಎಂದರು.

ಥೀಮ್ ನಾರೀಶಕ್ತಿ ಮಹಿಳೆಯರ ತಂಡದಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಈ ವೇಳೆ ಝೆಂಕಾರ ತಂಡದ ಸದಸ್ಯ ವಿಜಯಕುಮಾರ್‌ಘನಶ್ಯಾಮ್, ಕನ್ನಡ ಸಾಂಸ್ಕೃತಿಕ ಸಮಿತಿ ಸದಸ್ಯರಾದ ದೀಪಕ್ ಬೇಂಗ್ರೆ, ಶಿಲ್ಪಾ ಪಾಟೀಲ್, ಅಶ್ವಿನಿ ಕಿಶೋರ್, ದೀಪ್ತಿ ತರುಣ್, ಸೌಮ್ಯಾ, ಮಧು ಮನಮೋಹನ್, ಪ್ರೀತಿ ಬೇಂಗ್ರೆ, ಡಾ. ಸುದರ್ಶನ್, ಕರ್ಣ ನಾಟಿಕರ್, ಪ್ರದೀಪ್ ಇತರರಿದ್ದರು.

ಇಂದಿನ ಆಮಂತ್ರಣ

ದಿ. 1

■ **ರಾಮಕೃಷ್ಣಮಠ:** ಗೀತ ಜಯಂತಿ ಅಂಗವಾಗಿ ಶಾರದ ಗುರುಕುಲದಿಂದ ಗೀತಾ ಪಾರಾಯಣ, ವಿಶೇಷ ಭಜನೆ ಕಾರ್ಯಕ್ರಮ. ಸ್ಥಳ: ರಾಮಕೃಷ್ಣಮಠ, ಬಸವನಗುಡಿ. ಬೆಳಗ್ಗೆ 5.30 ರಿಂದ

■ **ಕನ್ನಡ ಸಂಘ ಕೃಷಿ ವಿವಿ:** 70ನೇ ಕನ್ನಡ ರಾಜ್ಯೋತ್ಸವ. ಅತಿಥಿಗಳು: ಸಾಹಿತಿ ರಹಮತ್ ತರೀಕೆರೆ, ಬೆಂಗಳೂರು ಕೃಷಿ ವಿವಿ ಕುಲಪತಿ ಡಾ.ಎಸ್.ವಿ.ಸುರೇಶ್, ಗಾಯಕ ಹರ್ಷ ಎಂ.ಆರ್. ಸ್ಥಳ: ಕುವೆಂಪು ಸಭಾಂಗಣ, ಜಿಕೆವಿಕೆ. ಬೆಳಗ್ಗೆ 10.30ಕ್ಕೆ.

■ **ರಾಜ್ಯ ಎಡ್ಸ್ ನಿಯಂತ್ರಣ ಸೊಸೈಟಿ:** ಆರೋಗ್ಯ ಇಲಾಖೆ ಹಾಗೂ ವಿವಿಧ ಸಂಘ-ಸಂಸ್ಥೆಗಳ ಸಹಯೋಗದಲ್ಲಿ ವಿಶ್ವ ಎಡ್ಸ್ ದಿನಾಚರಣೆ. ಅತಿಥಿಗಳು: ಬೆಂಗಳೂರು ನಗರ ಜಿಲ್ಲಾಧಿಕಾರಿ ಜಗದೀಶ್, ಜಯದೇವ ಹೃದ್ರೋಗ ಆಸ್ಪತ್ರೆಯ ನಿರ್ದೇಶಕ ಬಿ.ದಿನೇಶ್, ಜಿಪಂ. ಸಿಇಒಆರ್. ಯತೀಶ್, ಸ್ಥಳ: ಜಯದೇವ ಆಸ್ಪತ್ರೆ 1ನೇ ಮಹಡಿ ಸಭಾಂಗಣ, ಬೆಳಿಗ್ಗೆ 11 ಕ್ಕೆ.

■ **ಮಾನವ ಹಕ್ಕುಗಳ ದಿನಾಚರಣೆ:** ಸೇಂಟ್ ಜೋಸೆಫ್ ವಿವಿ ಸೇರಿದಂತೆ ವಿವಿಧ ಸಂಘ-ಸಂಸ್ಥೆ ಸಹಯೋಗದಲ್ಲಿ ವಿಶ್ವ ಮಾನವ ಹಕ್ಕುಗಳ ದಿನಾಚರಣೆ. ಅತಿಥಿಗಳು: ಕಾನೂನು ಆಯೋಗ ಅಧ್ಯಕ್ಷ ನ್ಯಾ. ಅಶೋಕ್ ಬಿ.ಹಿಂಚಿಗೇರಿ, ಇಂಡಿಯನ್ ಸೋಶಿಯಲ್ ಇನ್‌ಸ್ಟಿಟ್ಯೂಟ್ ನಿರ್ದೇಶಕ ರೇವ್ ಸೆಲ್ವರಾಜ್ ಆರುಳಾಥನ್, ಪ್ರಾಧ್ಯಾಪಕಿ ವಿ.ಎಸ್. ಎಲಿಜಬೆತ್. ಸ್ಥಳ: ಇಂಡಿಯನ್ ಸೋಶಿಯಲ್ ಇನ್‌ಸ್ಟಿಟ್ಯೂಟ್. ಮಧ್ಯಾಹ್ನ 3ಕ್ಕೆ.

■ **ಗ್ರಾಮೀಣಾಭಿವೃದ್ಧಿ-ಪಂಚಾಯತ್ ರಾಜ್ ಇಲಾಖೆ:** ಗಾಂಧಿ ಗ್ರಾಮ ಪುರಸ್ಕಾರ-2023-24 ಮತ್ತು ಇ-ಸ್ವತ್ತು 2.0 ತಂತ್ರಾಶಕ್ಕೆ ಚಾಲನೆ. ಅತಿಥಿಗಳು: ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ. ಕೆ.ಶಿವಕುಮಾರ್, ಸಚಿವ ಪ್ರಿಯಾಂಕ್ ಖರ್ಗೆ, ಸ್ಪೀಕರ್ ಯು.ಟಿ.ಖಾದರ್, ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ. ಬೆಳಗ್ಗೆ 11ಕ್ಕೆ.

■ **ಮಲ್ಲೇಶ್ವರಂ ಬ್ರಾಹ್ಮಣ ಸಭಾ ಟ್ರಸ್ಟ್:** ಮಲ್ಲೇಶ್ವರಂ ಸಿವಿಕ್ ಮ್ಯಾನೇಜ್ಮೆಂಟ್ ಸಮಿತಿ ಸಹಯೋಗದಲ್ಲಿ ಶ್ರೀ ಗೀತಾ ಜಯಂತ್ಯುತ್ಸವ ಕಾರ್ಯಕ್ರಮ. ಅತಿಥಿಗಳು: ನಿವೃತ್ತ ನ್ಯಾ. ಕೆ.ವಿ.ನರ ಸಿಂಹನ್, ಮಲ್ಲೇಶ್ವರಂ ಬ್ರಾಹ್ಮಣ ಟ್ರಸ್ಟ್ ಅಧ್ಯಕ್ಷ ಪಾವಗಡ ಪ್ರಕಾಶ್ ರಾವ್, ವೂಡೇ ಪಿ.ಕೃಷ್ಣ, ಹೊರನಾಡಿನ ಧರ್ಮಕರ್ತ ಭೀಮೇಶ್ವರ ಜೋಷಿ, ಖ್ಯಾತ ಜ್ಯೋತಿಷಿ ಬಿ.ಎಸ್ .ದ್ವಾರಕನಾಥ್. ಸ್ಥಳ: ವೇಣುಗೋಪಾಲ ಸ್ವಾಮಿ ದೇವಾಲಯ, ಕೃಷ್ಣಪ್ರವಚನ ಮಂದಿರ, 11ನೇ ಅಡ್ಡರಸ್ತೆ, ಮಲ್ಲೇಶ್ವರ, ಸಂಜೆ 5 ಕ್ಕೆ.

■ **ರಂಗ ಬದುಕು ಟ್ರಸ್ಟ್:** ರಹಮತ್ ತರೀಕೆರೆ ಅವರ ಕೃತಿಯಾಧಾರಿತ ಅಮೀರ್‌ಭಾಯಿ ಕರ್ನಾಟಕಿ ನಾಟಕ ಪ್ರದರ್ಶನ. ನಿರ್ದೇಶನ: ಡಾ.ಬೇಲೂರು ರಘುನಂದನ್. ಅತಿಥಿಗಳು: ನಾಟಕ ಅಕಾಡೆಮಿ ಅಧ್ಯಕ್